ಶ್ರೀ ಎಂ. ಗಂಗಣ್ಣ.—ಮಾನ್ಯ ಅಧ್ಯಕ್ಷರೇ ಇಲ್ಲಿಯವರೆಗೆ ಕಳ್ಳ ಸಾಗಾಣಿಕೆಯಾಗಿರುವ ಗಂಧದಮರ ಗಳ ಪ್ರಮಾಣವೆಷ್ಟು ಮತ್ತು ಆದರೆ ಕಮ್ಮತ್ತು ಏನು ಎನ್ನುವುದನ್ನು ತಿಳಿಸುತ್ತೀರಾ ಸ್ವಾಮಿ ?

MR. SPEAKER.—That does not arise out of this question.

ಶ್ರೀ ಎಂ. ರಾಮಪ್ಪ.—ನನ್ನ ಅಭಿಪ್ರಾಯ ಇಷ್ಟೇ. ನಮ್ಮ ಅರಣ್ಯವನ್ನು ರಕ್ಷಿಸಬೇಕಾದರೆ ಕೆಲವು ಕಾರ್ಯಕ್ರಮಗಳನ್ನು ಹಾಕಿಕೊಂಡಿದ್ದೀರಿ. ಇಷ್ಟೇ ಕಡಿಯಬೇಕೆಂದು ಕಾರ್ಯಕ್ರಮ ಇದೆ. ಅದೇ ರೀತಿ ವಿಷ್ಟು ಮರಗಳು ಇವೆ ಎಂಬ ಬಗ್ಗೆ ನಿಖರವಾಗಿ ಲೆಕ್ಕ ಹಾಕಿದ್ದೀರಾ ಎಂದು ಕೇಳುತ್ತಿದ್ದೇನೆ.

ಅಧ್ಯಕ್ಷರು.—ಸಿಸ್ಟಮ್ಯಾಟಿಕ್ಕಾಗಿ ಮಾಡಿಲ್ಲ. ಅಂದಾಜು ಪ್ರಕಾರ ಮಾಡಿವ್ವಾರೆ. ಆ ನಾಮಿತ ಮರ ಗಳೆಂದು ಮಾನ್ಯ ಮಂತ್ರಿಗಳು ಹೇಳಿದ್ದಾರೆ. ಇನ್ನೇನಾದರೂ ವಿಷಯ ಕೇಳುವುದಿದ್ದರೆ ಮಾನ್ಯ ಮಂತ್ರಿಗಳನ್ನು ಮಕ್ತಾ ಭೇಟಿ ಮಾಡಿ ಚರ್ಚೆ ಮಾಡಿ.

ಶ್ರೀ ಎಂ. ರಾಮಪ್ಪ.—ಆದಾಗದೇ ಬೆಳೆಯತಕ್ಕಂತಹ ಮರಗಳನ್ನು ಲೆಕ್ಕ ಇಟ್ಟಿಲ್ಲ ಎಂದರೆ, ಅವು ಗಳನ್ನೆನಾದರೂ ಕಳ್ಳ ಸಾಗಾಣಿಕೆ ಮಾಡುವುದಕ್ಕೆ ಇಟ್ಟಿದ್ದೀರಾ? ಲೆಕ್ಕಕ್ಕೆ ಯಾವಾಗ ಸಿಗಲಿಲ್ಲ ಎಂದ ಮೇಲೆ ಅವುಗಳನ್ನು ಕಳ್ಳತನ ಮಾಡುವುದಕ್ಕೆ ಅವಕಾಶವಾಗುತ್ತದೆ ಎನ್ನುವ ಅಭಿಪ್ರಾಯ ಇದೆ.

ಶ್ರೀ ಜೆ. ಪೂವೇಗೌಡ.—ಇಲ್ಲಿಯವರೆಗೆ ನಮ್ಮ ಅಧಿಕಾರಿಗಳು ಕಳ್ಳತನ ಮಾಡುವುದಕ್ಕೆ ಜೋಗಿರ ತಕ್ಕಂತಹ ನಿದರ್ಶನಗಳು ಸರ್ಕಾರದ ಗಮನಕ್ಕೆ ಬಂದಿಲ್ಲ. ಬಾಯಿಲೆ ಹಿಡಿದಿರತಕ್ಕ, ವಯಸ್ಸು ಆಗಿರ ತಕ್ಕಂತಹ ಮರಗಳನ್ನೆಲ್ಲಾ ಲೆಕ್ಕಕ್ಕೆ ತೆಗೆದುಕೊಂಡು ಸುಮಾರು ೧,೬೦೦ ಟನ್ ಮರಗಳನ್ನು ಕಡಿಯಬೇಕೆಂದ ಒಂದು ಲೆಕ ಮನ್ನು ಇಟ್ಟುಕೊಂಡು ಅವುಗಳನ್ನು ಕಡಿಯುತ್ತಿದ್ದೇವೆ.

Mavinsoor Tank in Chitapur Constituency

123. SRI PRABHAKAR TELKAR (Chittapur).—Will the Minister for Transport and Minor Irrigation be pleased to state.—

(a) whether "Mavinsoor Tank" in Chittapur Constituency has been investigated;

(b) if so, whether there is any proposal so take up this work immediately;

(c) whether the Government is aware that the Mavinsoor Tank will irrigate the lands mostly belonging to Lambanis S. C. & S. T. people of this area?

SRI M. M. J. SADYOJATHA (Minister for Transport and Minor Irrigation) –

(a) No

(b) Does not arise.

(c) This may be known only after investigation.

ಶ್ರೀ ಪ್ರಭಾಕರ್ ತೇಲ್ಕರ್.—ಅಧ್ಯಕ್ಷರೇ, ಈ "ಮಾವಿನಸೂರ್ ಕೆರೆ" ಬಗ್ಗೆ ನಾನು ೧೯೭೨ನೇ ಇಸವಿಯಿಂದಲೂ ಕೇಳುತ್ತಿದ್ದೇನೆ. ಮಾನ್ಯ ಮುಖ್ಯಮಂತ್ರಿಯವರಿಗೆ ಪತ್ರ ಬರೆದಿದ್ದೇನೆ. ಡಿ.ಪಿ.ಸಿ. ಮೀಟಿಂಗ್‌ನಲ್ಲಿ ಇದರ ಪ್ರಶ್ನೆ ಉದ್ಭವವಾಗಿದೆ. ತಾಲ್ಲೂಕು ರಿಲೀಫ್ ಕಮಿಟಿಯಲ್ಲಿ ಈ ಪ್ರಶ್ನೆ ಬಂದಿದೆ. ಏಳಂಟು ವರ್ಷಗಳಿಂದ "ಮಾವಿನಸೂರ್ ಕೆರೆ" ಬಗ್ಗೆ ಕೇಳುತ್ತಿದ್ದೇನೆ. ಇನ್ನೂ ಇನ್ವೆಸ್ಟಿಗೇಷನ್ ಆಗಿಲ್ಲ ಎಂದು ಹೇಳಿದರೆ ಹೇಗೆ? Particularly this will help Lambanis, SCs, STs who have got lands which come under this Tank. It is because the weaker

sections of the people will be benefitted, the Government is not interested for the last 8 years?

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಈ ಕೆರೆಯಿಂದ ಸದರಿ ಪ್ರದೇಶದ ಬಹುತೇಕ ಅನುಸೂಚಿತ ಜಾತಿ ಹಾಗೂ ಅದಿಮ ಜಾತಿಯವರಿಗೆ ಅನುಕೂಲವಾಗುತ್ತದೆನ್ನುವ ವಿಷಯವನ್ನು ಇನ್ವೆಸ್ಟಿಗೇಷನ್ ಆದ ನಂತರ ಹೇಳಬಹುದು. ಇನ್ನೂ ತನಿಖೆ ಪೂರ್ಣಗೊಂಡಿಲ್ಲ. ಪ್ರಿಲಿಮನರಿ ಇನ್ವೆಸ್ಟಿಗೇಷನ್‌ನಲ್ಲಿ ೧೨೭೦ ಎಕರೆ ಇರಿಗೇಟ್ ಆಗುತ್ತದೆಂದೂ ಹಾಗೂ ೩೮ ಲಕ್ಷ ರೂಪಾಯಿ ವೆಚ್ಚ ಆಗುತ್ತದೆಂದು ತೋರಿಸಲಾಗಿದೆ. ಇದಕ್ಕೆ ವಿಶ್ವಬ್ಯಾಂಕಿನ ಸಹಾಯ ಪಡೆಯುವ ಯೋಚನೆ ಇದೆ. ಫೀಸಿಬಲಿಟಿ ರಿಪೋರ್ಟ್ ಬಂದನಂತರ ಅದನ್ನು ತೆಗೆದುಕೊಳ್ಳುತ್ತೇನೆ.

ಶ್ರೀ ಪ್ರಭಾಕರ್‌ತೇಲ್ಕರ್.—ಮೈನರ್ ಇರಿಗೇಷನ್‌ನಲ್ಲಿ ಹಣ ಇದೆ ವಿಶ್ವಬ್ಯಾಂಕ್ ಸಹಾಯ ಏಕೆ ಬೇಕು? ೩೦ ಲಕ್ಷ ರೂಪಾಯಿ ಏನೂ ಹೆಚ್ಚಲ್ಲ. ಸರ್ಕಾರದವರೇ ಈ ಕೆರೆಯನ್ನು ತೆಗೆದುಕೊಂಡು ಪೂರೈಸಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ.ಎಂ.ಜೆ. ಸದ್ಯೋಜಾತ.—ಫೀಸಿಬಲಿಟಿ ರಿಪೋರ್ಟ್ ಬಂದ ನಂತರ ಆ ಯೋಜನೆ ಮಾಡುತ್ತೇವೆ.

Strentgh of Employees in Weights and Measures Department.

177. SRI S.S. ARAKERI (Balloli)—Will the Minister for Co-operation be pleased to state.—

(a) the total number of employees in the Department of Weights and Measures in all categories like Class I, Class II, Class III. and Class IV;

(b) the total number of SC & ST in all these cadres and their percentage;

(c) total number of appointments made since the last 5 years and category of posts filled in;

(d) the total number of SC & ST so appointed?

SRI H.C. SRIKANTAIAH (Minister for Co-operation)—

(a)

Class I	6
Class II	26
Class III	204
Class IV	96
total	332

(b)

	No.	*Percentage*
Class I	1	16.6
Class II	6	26.9
Class III	51	25.0
Class IV	38	39.6
Total	96	